
# ‘ಕಲಿವ ಶಾಲೆಯ ಹಲವು ಮುಖಗಳು’

ವಿವಿಧ ಕೈಗಾರಿಕೆಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗದ ಉನ್ನತ ಅಧಿಕಾರಿಯಾಗಿದ್ದ ಶ್ರೀ ಎಸ್. ವಿ. ಮಂಜುನಾಥ್ ಅವರು ಹನ್ನೆರಡು ವರ್ಷಗಳಿಂದ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಕರ್ನಾಟಕ ರಾಜ್ಯ ಸಂಸ್ಥೆಯ ಮುಖ್ಯಸ್ಥರಾಗಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಕರ ಅಭಿವೃದ್ಧಿ, ಮುಖ್ಯ ಶಿಕ್ಷಕ-ಅಧಿಕಾರಿಗಳ ನಾಯಕತ್ವ ಬೆಳವಣಿಗೆ ಇವರ ಆಸಕ್ತಿಯ ವಿಷಯ. ಶಾಲೆ-ಶಿಕ್ಷಣ ವ್ಯವಸ್ಥೆಗಳ ಒಂದು ಅನುಭವ ಕಥನವಾದ ಈ ಕೃತಿಯು ಶಿಕ್ಷಣ ಕ್ಷೇತ್ರದಲ್ಲಿನ ಲೇಖಕರ ಅನುಭವಗಳನ್ನು ಕುರಿತು ಬರೆದ ಅಂಕಣ ಬರಹಗಳ ಸಂಗ್ರಹವಾಗಿದೆ. ಇಂಗ್ಲಿಷಿನಲ್ಲಿ ಬರೆದ ಅಂಕಣಗಳನ್ನು ಅನುವಾದಿಸಿ, ಕನ್ನಡ ಬರಹಗಳ ಜೊತೆ ಸೇರಿಸಿ, ವಿಷಯವಾರು ವಿಂಗಡಿಸಿ ಇಲ್ಲಿ ನೀಡಲಾಗಿದೆ. ಇಲ್ಲಿಯವರೆಗೆ ವ್ಯವಸ್ಥೆಯ ಬಗ್ಗೆ ಶಿಕ್ಷಕರು, ಚಿಂತಕರು ಬರೆದ ಬರಹಗಳಿಗೆ ವಿಭಿನ್ನವಾಗಿ ಉನ್ನತ ಸ್ಥಾನದಲ್ಲಿದ್ದು, ಸರಕಾರದ ಉನ್ನತ ಅಧಿಕಾರಿಗಳ ಜೊತೆ ಸಮಾಲೋಚಿಸಿ, ಕೊರತೆಗಳ ನಿರ್ಮೂಲನಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಿದ ಶ್ರೀ ಎಸ್.ವಿ. ಮಂಜುನಾಥ್ ಅವರ ಈ ಕೃತಿಯು ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ.

ಮೊದಲನೆ ಭಾಗ **ಶಾಲೆ-ವಿದ್ಯಾರ್ಥಿ-ಕಲಿಕೆ.** ಶಿಕ್ಷಣದ ಆಶಯವು ವಿವಿಧ ಶಾಲೆಗಳಲ್ಲಿ ಪ್ರಕಟವಾಗಿರುವ ಬಗೆಯನ್ನು ವಿವರಿಸುತ್ತದೆ. ವಿವಿಧ ಶೈಕ್ಷಣಿಕ ಪ್ರಯೋಗಗಳು, ಆಚರಣೆಗಳನ್ನು ವೀಕ್ಷಿಸಿ, ಈ ಬಗೆಗೆ ಶಿವರಾಮ ಕಾರಂತರ ಚಿಂತನೆಗಳು ಇಂದೂ ಪ್ರಸ್ತುತವಾಗಿರುವುದನ್ನು ಗಮನಿಸಿದೆ. ಕುಟುಂಬ ಹಿನ್ನೆಲೆ ಮಗುವಿನ ಶಿಕ್ಷಣದ ಮೇಲೆ ಬೀರುವ ಪರಿಣಾಮ, ಮಕ್ಕಳ ಕುರಿತಾಗಿನ ನಂಬಿಕೆಗಳು, ಶಾಲಾ ಪರಿಸರದಲ್ಲಿ ಮಗುವಿನ ಸಾಮಾಜಿಕ ಬೆಳವಣಿಗೆ, ದೈಹಿಕ ಶಿಕ್ಷೆ, ಅತಿಯಾಗಿ ಓದಿಸುವ ಪೋಷಕರ ಮನೋಭಾವ ಇವುಗಳನ್ನು ವಿಶ್ಲೇಷಿಸುವುದಲ್ಲದೆ ಎರಡು ಮಕ್ಕಳ ಚಿತ್ರಗಳನ್ನೂ ವಿಮರ್ಶಿಸಿದೆ. ಶಿಕ್ಷಕರಲ್ಲೆ ಓದುವ ಹವ್ಯಾಸ ಇಲ್ಲದಾಗ, ಮಕ್ಕಳಲ್ಲಿ ಓದುವಿಕೆಯನ್ನು ಹೇಗೆ ಬೆಳೆಸುತ್ತಾರೆ? ಕಥೆ, ಚಟುವಟಿಕೆಗಳಿಂದ ಮಕ್ಕಳು ಖುಷಿಗಾಗಿ ಓದನ್ನು ಕಲಿಯುತ್ತವೆ.

ಎರಡನೆಯ ಭಾಗ **ಶೈಕ್ಷಣಿಕ ನೀತಿ ನಿರೂಪಣೆ ಮತ್ತು ಆಡಳಿತ ವ್ಯವಸ್ಥೆ.** ಬಿಇಓ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳ ದಿನಚರಿ ಹಾಗೂ ಕಾರ್ಯ ನಿರ್ವಹಣೆಯ ರೀತಿಯ ಉದಾಹರಣೆಗಳೊಂದಿಗೆ ಪ್ರಾರಂಭವಾಗುವ ಈ ಭಾಗ ವ್ಯವಸ್ಥೆಯ ಕೊರತೆಗಳನ್ನು ಗಮನಕ್ಕೆ ತಂದುಕೊಂಡಿದೆ. ಶಾಲಾ ನಿರ್ವಹಣೆಯಲ್ಲಿ ನಿಯಮಗಳ ಅನುಷ್ಠಾನ, ಶಿಕ್ಷಣದ ಮೂಲ ಉದ್ದೇಶಗಳ ಸಾಧನೆಗಾಗಿ ತಾವು ಇರುವುದು ಎಂದು ಆಡಳಿತ ವ್ಯವಸ್ಥೆ ತಿಳಿಯುವುದು, ಅಗತ್ಯಗಳಿಗೆ ಅಧಿಕಾರಿಗಳ ಸ್ಪಂದನೆ ಸಮರ್ಪಕವಾಗಿ ಇರಬೇಕಾದುದು - ಒಟ್ಟಿನಲ್ಲಿ ವ್ಯವಸ್ಥೆಯ ವಿವಿಧ ಹಂತಗಳಲ್ಲಿನ ಅಧಿಕಾರಿಗಳ ಪಾತ್ರ, ಎದುರಿಸಬೇಕಾದ ಸಮಸ್ಯೆಗಳು ಇವು ಇಲ್ಲಿನ ವಸ್ತು. ಶಾಲೆ, ವಸತಿಶಾಲೆ, ಕೇರಳ ಮೊದಲಾದೆಡೆ ಸರ್ಕಾರಿ ಶಾಲೆಗಳನ್ನು ಬಲಗೊಳಿಸುವಿಕೆ ಇವುಗಳನ್ನು ಆಡಳಿತ ಸುಧಾರಣೆಗೆ ಅನುವಾಗುವಂತೆ ಚರ್ಚಿಸಲಾಗಿದೆ. ಶಾಲಾ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಡಿಪಿಇಪಿಯ ಅಡಿ ಹಣಕಾಸಿನ ಬಳಕೆಯ ಮೇಲ್ವಿಚಾರಣೆ, ಮಾಹಿತಿ ಕಲೆಹಾಕಲು ಬ್ಲಾಕ್ ಮತ್ತು ಕ್ಲಸ್ಟರ್ ರಿಸೋರ್ಸ್ ಸೆಂಟರುಗಳನ್ನು ರಚಿಸಿದ್ದು, ಇವು ಸೀಮಿತ ಅವಧಿಯದ್ದು ಎಂದು ಡಯಟ್‌ನವರು ಇವರೊಡನೆ ಸಂಬಂಧ ಇರಿಸಿಕೊಳ್ಳಲಿಲ್ಲ. ಆದರೆ ಸರ್ವಶಿಕ್ಷಣ ಅಭಿಯಾನದಲ್ಲಿ ಇವನ್ನು ವಾರ್ಷಿಕ ಯೋಜನೆ ಮತ್ತು ಸಾಧನೆಯ ಅವಲೋಕನದ ಪ್ರಕ್ರಿಯೆಯಲ್ಲಿ ತೊಡಗಿಸಿ, ಶೈಕ್ಷಣಿಕ ಜಿಲ್ಲಾ ಮಾಹಿತಿ ವ್ಯವಸ್ಥೆ ಡಿಐಎಸ್‌ಇಗಾಗಿ ಅಂಕಿ ಅಂಶ ಸಂಗ್ರಹಣೆಗೆ ಇವನ್ನು ಬಳಸಿತು. ಆದರೆ, ಏಕೆ ಎಂಬುದನ್ನೇ ಹೇಳದೆ ಶಿಕ್ಷಕರಿಗೆ ಮಕ್ಕಳ ಕುರಿತ ವಿವಿಧ ಮಾಹಿತಿ ಸಂಗ್ರಹಣೆ ಮಾಡಲು ಹೇಳುವ ಈ ಸಿಆರ್‌ಸಿ-ಬಿಆರ್‌ಸಿ ಸಂಪನ್ಮೂಲ ವ್ಯಕ್ತಿಗಳಿಗಾಗಲಿ, ಶಿಕ್ಷಕರಿಗಾಗಲಿ ತಮ್ಮ ಈ ಕೆಲಸ ಅರ್ಥಹೀನ ಎಂಬ ಅಸಮಾಧಾನ ಇದೆ. ಮಾದರಿ ಪಾಠ ಮಾಡಿ ತೋರಿಸಿ, ಶಿಕ್ಷಕರ ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಇವರು ಅಸಮರ್ಥರಾಗಿದ್ದಾರೆ. ಸಮನ್ವಯ, ಮೇಲುಸ್ತುವಾರಿ ಇಲ್ಲದೆ ಸರಕಾರದ ಶಿಕ್ಷಣ ಯೋಜನೆಗಳು ವಿಫಲವಾಗುತ್ತಿರುವ ಇಂತಹ ಅನೇಕ ಉದಾಹರಣೆಗಳನ್ನು ಲೇಖಕರು ಚರ್ಚಿಸಿದ್ದಾರೆ. ನ್ಯಾಯೋಚಿತ ಅಧಿಕಾರಾವಧಿ ಇಲ್ಲದೆ ಹಿರಿಯ ಐಎಎಸ್ ಅಧಿಕಾರಿಗಳು ಬೇಗನೆ ವರ್ಗವಾಗುವುದು, ತರಗತಿಯಿಂದ ಶಿಕ್ಷಕರು ಗೈರು




**ಕೃತಿ:** ಕಲಿವ ಶಾಲೆಯ ಹಲವು ಮುಖಗಳು
**ಲೇಖಕ :** ಎಸ್.ವಿ. ಮಂಜುನಾಥ್
**ಪ್ರಕಾಶನ :** ಎಂ.ಎಂ. ಪಬ್ಲಿಕೇಷನ್
ಮೊ. 9449353830
**ಬೆಲೆ:** 300 **ಪುಟ:** 320

ಹಾಜರಾಗುವುದು ವ್ಯವಸ್ಥೆಯ ಲೋಪಗಳಿಗೆ ಕಾರಣ ಎಂಬ ನಿರೂಪಣೆಯ ಸತ್ಯತೆ, ಪರಿವರ್ತನೆ ಹೊಂದಬೇಕಾದ ಶಿಕ್ಷಕರ ಸಂಘಗಳು, ಸಾರ್ವಜನಿಕ ಶಿಕ್ಷಣವನ್ನು ಕಡೆಗಣಿಸಲಾಗದು – ಈ ಮುಂತಾದ ಸಮಸ್ಯೆಗಳನ್ನು ವಿವರಿಸಿದ್ದಾರೆ.

ಮೂರನೆಯ ಭಾಗ **ಶಿಕ್ಷಕರ ಶಿಕ್ಷಣ.** ಇಲ್ಲಿ ಐತಿಹಾಸಿಕ ದೃಷ್ಟಿಕೋನದಿಂದ ಶಿಕ್ಷಕನ ವೃತ್ತಿ ಬದುಕಿನ ಎಲ್ಲ ಆಯಾಮಗಳ ಶೋಧನೆ ಇದೆ. ಮಕ್ಕಳ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕನದು ಮಹತ್ವದ ಪಾತ್ರ. ಸಮಾಜದ ನಿರೀಕ್ಷೆ, ವಾಸ್ತವಿಕ ಸಾಧನೆಗಳ ನಡುವಿನ ಅಂತರವನ್ನು ಗುರುತಿಸಿ, ಸೇವಾನಿರತ ಶಿಕ್ಷಕರ ತರಬೇತಿಯ ಪ್ರಾಮುಖ್ಯವನ್ನು ಗುರುತಿಸಿ, ಕರ್ನಾಟಕ ಸರ್ಕಾರದ 'ಗುರುಚೇತನ' ಕಾರ್ಯಕ್ರಮವನ್ನು ವಿವರಿಸಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಬಗ್ಗೆ ಸರಿಯಾದ ಕಾರ್ಯನೀತಿಯನ್ನು ತರಬಹುದೆಂಬ ಭರವಸೆ ಇಲ್ಲಿದೆ.

ನಾಲ್ಕನೆಯ ಭಾಗ **ಶೈಕ್ಷಣಿಕ ಅನುವಾದ.** ಮೂರು ಲೇಖನಗಳನ್ನು ಹೊಂದಿದ ಈ ಭಾಗ ಚಿಕ್ಕದಾದರೂ, ಯೋಚಿಸುವ ಪ್ರಾದೇಶಿಕ ಭಾಷೆಯಲ್ಲಿ ವಿಜ್ಞಾನದ ಉನ್ನತ ಜ್ಞಾನ ದೊರೆಯುವಂತಾದರೆ ಶಿಕ್ಷಕರ, ಮಕ್ಕಳ ಮೇಲಿನ ಹೊರೆ ತಗ್ಗಿ, ನಿಜವಾದ ಸ್ವಂತ ಕಲಿಕೆ ಸಾಧ್ಯವಾಗಿ ಅವರು ಸ್ಪರ್ಧೆಯಲ್ಲಿ ಹಿಂದೆ ಬೀಳುವುದು ತಪ್ಪುತ್ತದೆ, ಏಕೆಂದರೆ ಇಂಗ್ಲಿಷಿನಲ್ಲಿ ಪರಿಕಲ್ಪನೆಗಳನ್ನು ಅರ್ಥೈಸಿಕೊಂಡು, ಮನದಟ್ಟಾಗುವಂತೆ ಬೋಧಿಸಬಲ್ಲ ಶಿಕ್ಷಕರು ಕೆಲವೇ ಮಂದಿ ಸಿಕ್ಕುತ್ತಾರೆ. ಭಾರತೀಯ ಭಾಷೆಗಳಲ್ಲಿ ಉತ್ತಮ ಗುಣಮಟ್ಟದ ಕಲಿಕಾ ಸಂಪನ್ಮೂಲಗಳ ನಿರ್ಮಾಣವು ಆಗಬೇಕಾದ ಕೆಲಸ.

ಶ್ರೀ ಎಸ್.ವಿ. ಮಂಜುನಾಥ್ ಅವರ ಪುಸ್ತಕ ಶಿಕ್ಷಣ ವ್ಯವಸ್ಥೆಯ ಬಗ್ಗೆ ತಮ್ಮ ಸ್ವಂತ ಅನುಭವ, ಅನುಭೂತಿಗಳಿಂದ ಹಲವು ಒಳನೋಟಗಳನ್ನು ಒದಗಿಸಿ, ಶಿಕ್ಷಣಾಸಕ್ತರಿಗೆ ಒಳ್ಳೆಯ ಓದನ್ನು ಒದಗಿಸುತ್ತದೆ. ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿತವಾದುದರಿಂದ, ಪುಸ್ತಕದ ಕೊನೆಯ ಭಾಗದ ವಸ್ತುವಿಗೆ ಸ್ವತಃ ತಾನೇ ಒಂದು ಉದಾಹರಣೆಯನ್ನೂ ಒದಗಿಸಿದೆ. ಯಾವುದೇ ಅನುವಾದ ಅನುವಾದಿತ ಭಾಷೆಯ ಲಯವನ್ನು ಹೊಂದಿರುವುದು ಕಷ್ಟಸಾಧ್ಯ. ಪಾರಿಭಾಷಿಕ ಪದಗಳಿಗೆ ವಿಷಯ ಶಬ್ದಕೋಶಗಳು ಇನ್ನೂ ನಿರ್ಮಾಣವಾಗಬೇಕಿದೆ. ಫೆಲಿಸಿಟೇಟರ್ ಎನ್ನುವುದಕ್ಕೆ, ಅನುಕೂಲಕ, ಬೆಂಬಲಿಗ ಸಹಾಯಕ, ಮಧ್ಯಸ್ಥ ಇತ್ಯಾದಿಗಳ ಬದಲು ಹೊಸದಾಗಿ ಯೋಚಿಸಿ, ಸುಗಮಕಾರ ಎಂದು ಬಳಸಿರುವುದು ಉಚಿತ. ಸುಗಮ ಅನುವಾದ ಮಾಡಲು ಲೇಖಕರು ಪಟ್ಟ ಶ್ರಮ ಸಾರ್ಥಕವಾಗಿದೆ. ಶಿಕ್ಷಕರ ಅಭಿವೃದ್ಧಿಯ ಹೊಣೆ ಶಿಕ್ಷಕರದೇ ಲೇಖನದ ಮೂಲ ಓದಲು ಸಿಕ್ಕಿತು. ಜೊತೆಗಾರರಿಂದ ಕಲಿಯುವಿಕೆ ಶೀಘ್ರ, ಮತ್ತು ಸಂತೋಷದಾಯಕ ಎಂಬುದನ್ನು ನಮ್ಮ ಹಿರಿಯರು ಹಿಂದೆಯೇ ಹೇಳಿದ್ದಾರೆ: '**ಆಚಾರ್ಯಾತ್ ಪಾದಮಾದತ್ತೇ ಪಾದಂ ಶಿಷ್ಯಃ ಸ್ವಮೇಧಯಾ । ಪಾದಂ ಸಬ್ರಹ್ಮಚಾರೀಭ್ಯಃ ಪಾದಂ ಕಾಲಕ್ರಮೇಣ ತು ॥**' ಇದು ಶಿಕ್ಷಣ ರಂಗಕ್ಕೆ ಸಂಬಂಧಪಟ್ಟ ಒಂದು ಒಳ್ಳೆಯ ದಾಖಲಾತಿಯಾಗಿದ್ದು, ಶ್ರೀ ಮಂಜುನಾಥ್ ಅವರ ಪ್ರಯತ್ನ ಸ್ತುತ್ಯರ್ಹ.

*— ಡಾ. ಹೆಚ್. ಪಾಂಡುರಂಗ ವಿಠಲ*

## ಶ್ರೀಮಾತೆಯವರ ಉಪದೇಶಗಳು



❋ **ಶಿಷ್ಯ :** ಅಮ್ಮಾ, ಮನುಷ್ಯನ ಇಚ್ಛೆಗೆ ಅನುಗುಣವಾಗಿ ಎಲ್ಲ ಕೆಲಸಗಳೂ ನಡೆಯುವವೆ ? ಅವನ ಎಲ್ಲ ಆಸೆಗಳೂ ಅವನಿಚ್ಛೆಗನುಗುಣವಾಗಿ ಪೂರ್ಣಗೊಳ್ಳುವವೆ ?

**ಶ್ರೀಮಾತೆ :** ಉತ್ತಮವಾದ ಇಚ್ಛೆಗಳು ಮಾತ್ರ ಪೂರ್ಣಗೊಳ್ಳುವವು.

❋ ಯಾರು ಪಾರಮಾರ್ಥಿಕವಾದ ಚಿಂತನೆಯನ್ನು ಹೆಚ್ಚು ಹೆಚ್ಚು ನಡೆಸುತ್ತಾರೋ, ಅವರ ಮನಸ್ಸು ತುಂಬ ಸೂಕ್ಷ್ಮವಾಗುವುದು ; ಶುದ್ಧವಾಗುವುದು. ಅವರ ಮನಸ್ಸು ಏನನ್ನಾದರೂ ಹಿಡಿದುಕೊಂಡುಬಿಟ್ಟರೆ, ಅದನ್ನು ಬಲವಾಗಿ ಹಿಡಿಯುವುದು. ಅದು ಮಮತೆಯಂತೆ, ಆಸಕ್ತಿಯಂತೆ ಕಾಣಿಸುವುದು. ಮಿಂಚು ಮಿಂಚಿದಾಗ ಗಾಜಿನ ಕಿಟಕಿಯ ಮೂಲಕವಾದರೆ ಕಾಣಿಸುವುದು, ಮರದ ಕಿಟಕಿಯ ಮೂಲಕ ಕಾಣಿಸಲಾರದು.

❋ **ಶಿಷ್ಯ :** ಏನು ಮಾಡುವುದರಿಂದ ಭಗವಂತನ ಸಾಕ್ಷಾತ್ಕಾರ ಉಂಟಾಗುವುದು? ಪೂಜೆ, ಜಪ, ಧ್ಯಾನ — ಇವುಗಳಿಂದ ಉಂಟಾಗುವುದೆ ?

**ಶ್ರೀಮಾತೆ :** ಅದು ಯಾವುದರಿಂದಲೂ ಆಗದು.

**ಶಿಷ್ಯ :** ಹಾಗಾದರೆ ಯಾವುದರಿಂದ ಆಗುವುದು ?

**ಶ್ರೀಮಾತೆ :** ಕೇವಲ ಭಗವಂತನ ಕೃಪೆಯಿಂದ ಮಾತ್ರ. ಆದರೂ ಧ್ಯಾನ, ಜಪ ಮಾಡಬೇಕು. ಅದರಿಂದ ಮನಸ್ಸಿನ ಮಾಲಿನ್ಯ ಕಳೆದುಹೋಗುವುದು. ಪೂಜೆ, ಜಪ, ಧ್ಯಾನ — ಇವನ್ನೆಲ್ಲ ಮಾಡಬೇಕು. ಹೂವನ್ನು ಅಲುಗಾಡಿಸುತ್ತ ಇದ್ದರೆ ಅದರ ಸುಗಂಧ ಹೇಗೆ ಹೊರಹೊಮ್ಮುವುದೋ, ಶ್ರೀಗಂಧ ತೇಯುತ್ತ ಹೇಗೆ ಅದರ ಸುವಾಸನೆ ಹೊರಗೆ ಬರುವುದೋ, ಹಾಗೇ ಭಗವಂತನ ತತ್ತ್ವವನ್ನು ಆಲೋಚನೆ ಮಾಡುತ್ತ ತತ್ತ್ವಜ್ಞಾನದ ಉದಯವಾಗುವುದು. ಮನಸ್ಸಿನ ಆಸೆಗಳೆಲ್ಲ ನಾಶವಾದ ಕೂಡಲೇ ಸಾಕ್ಷಾತ್ಕಾರವುಂಟಾಗುವುದು.

*('ಶ್ರೀಶಾರದಾದೇವಿ ವಚನವೇದ', ಪು.೪೩೬–೪೩೭)*